ಕ್ರೀಡಾಂಗಣಕ್ಕೆ ನೀಡಿರುವ ಅನುದಾನ

13 (42) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಯುವಜನ ಸೇವೆ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ನಿರ್ಮಿಸುತ್ತಿರುವ ಕ್ರೀಡಾಂಗಣಕ್ಕೆ ಇದುವರೆವಿಗೂ ಎಷ್ಟು ಅನುದಾನ ಒದಗಿಸಲಾಗಿದೆ ;

(ಆ) ಕ್ರೀಡಾಂಗಣ ನಿರ್ಮಾಣ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ರೀತಿ ಕಾಮಗಾರಿ ವಿಳಂಬವಾಗಲು ಕಾರಣವೇನು ; ಇದನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು) :–

(ಅ) ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲು ರೂ. 20.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

(ಆ) ಬಂದಿದೆ.

(ಇ) ಒಳಾಂಗಣ ಕ್ರೀಡಾಂಗಣದ ಅಂದಾಜು ವೆಚ್ಚ ರೂ.50.00 ಲಕ್ಷಗಳಾಗಿದ್ದು, ಬಿಡುಗಡೆಯಾದ ಅನುದಾನ ರೂ. 20.00 ಲಕ್ಷಗಳಾಗಿರುವುದರಿಂದ ಕಾಮಗಾರಿ ವಿಳಂಬವಾಗಿರುತ್ತದೆ. ಹೆಚ್ಚುವರಿ ಅನುದಾನ ಲಭ್ಯವಾದ ನಂತರ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸುವರ್ಣ ವಸ್ತ್ರ ನೀತಿ ಯೋಜನೆ

14 (43) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸುವರ್ಣ ವಸ್ತ್ರ ನೀತಿ ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ. ಹಾಗೂ ಎಷ್ಟು ಬಳಕೆಯಾಗಿದೆ ;

(ಆ) ಬೀದರ್ ಜಿಲ್ಲೆಗೆ ಈ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಯಾವ ಸಂಘ ಸಂಸ್ಥೆಗಳನ್ನು ಯಾವ ಮಾನದಂಡದಡಿಯಲ್ಲಿ ಆಯ್ಕೆ ಮಾಡಲಾಗಿದೆ ?

ಶ್ರೀ ಬಾಬುರಾವ್ ಚಿಂಚನಸೂರ್ (ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :-

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜವಳಿ ನೀತಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಹಾಗೂ ಬಳಕೆಯಾದ ಅನುದಾನದ ವಿವರಗಳು

(ರೂ.ಲಕ್ಷಗಳಲ್ಲಿ)

ವರ್ಷ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಬಳಕೆಯಾದ (ವೆಚ್ಚವಾದ) ಅನುದಾನ
2011–12	2500.00	2500.00
2012–13	3500.00	3500.00
2013–14	7499.26	7499.08

(ಆ) ಬೀದರ್ ಜಿಲ್ಲೆಗೆ ಈ ಯೋಜನೆಯಡಿ ಬಿಡುಗಡೆಯಾದ ಅನುದಾನ (ತಾಲ್ಲೂಕುವಾರು ವಿವರಗಳು) (ರೂ.ಗಳಲ್ಲಿ)

ಕ್ರ.ಸ.	ತಾಲ್ಲೂಕು	3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ
1	ಬೀದರ್	2346495
2	ಹುಮನಾಬಾದ್	2151660
3	ಬಸವಕಲ್ಯಾಣ	3617400
4	ಭಾಲ್ಕಿ	7297485
5	ಔರಾದ	4425220
	ಒಟ್ಟು	**19838260**

(ಇ) ಸುವರ್ಣ ವಸ್ತ್ರ ನೀತಿ ಯೋಜನೆಯಡಿ ತರಬೇತಿ ಕಾರ್ಯಕ್ರಮಗಳನ್ನು ಈ ಕೆಳಕಂಡ ಸಂಘ/ಸಂಸ್ಥೆಗಳಲ್ಲಿ ಇಲಾಖೆಯಿಂದ ಸೃಷ್ಟಿಸಿದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳಿಂದ & ಖಾಸಗಿ ತರಬೇತಿ ಕೇಂದ್ರಗಳಿಂದ ಅನುಷ್ಠಾನಗೊಳಿಸಲಾಗಿದೆ.

1. ಬೆಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ಸ್‌ಟೈಲ್ ಟೆಕ್ನಾಲಜಿ, ಬೀದರ್ & ಹುಮನಾಬಾದ್.

2. ಕಲ್ಯಾಣ ವೊಕೇಷನಲ್ ಇನ್ಸ್‌ಟಿಟ್ಯೂಟ್ ಫಾರ್ ವುಮೆನ್ & ರೂರಲ್ ಡೆವಲಪ್‌ಮೆಂಟ್ ಬಸವಕಲ್ಯಾಣ.

3. ದೀಪಾಂಕರ ಚಾರಿಟಿ ಫೌಂಡೇಷನ್, ಭಾಲ್ಕಿ

4. ಔರಾದ್ ಅಫೇರಲ್ ಟ್ರೈನಿಂಗ್ ಸೆಂಟರ್, ಔರಾದ

5. ಗುರುರತ್ನ ಎಜುಕೇಷನ್ ಟ್ರಸ್ಟ್, ಔರಾದ

ಸಂಘ/ಸಂಸ್ಥೆಗಳನ್ನು ಈ ಕೆಳಕಂಡ ಮಾನದಂಡದಡಿಯಲ್ಲಿ ಆಯ್ಕೆ ಮಾಡಲಾಗಿದೆ.

1. ಕನಿಷ್ಠ 1400 ಚ. ಅ. ಕಟ್ಟಡವಿರಬೇಕು.

2. 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರಬೇಕು.

3. ಕಟ್ಟಡದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯದ ವ್ಯವಸ್ಥೆ ಇರಬೇಕು.

4. ತರಬೇತಿಗೆ ನಿಗದಿಪಡಿಸಿದ ಯಂತ್ರೋಪಕರಣಗಳು (ಯಾಂತ್ರೀಕೃತ ಹೊಲಿಗೆ ಯಂತ್ರಗಳನ್ನು) ಹೊಂದಿರತಕ್ಕದ್ದು.

5. ತರಬೇತಿಗೆ ನಿಗದಿಪಡಿಸಿದ ಸಿಲಬಸ್‌ನಂತೆ ತರಬೇತಿ ನೀಡುವ ಸಾಮರ್ಥ್ಯ ಮತ್ತು ವಿದ್ಯಾರ್ಹತೆಯುಳ್ಳ ತರಬೇತಿದಾರರನ್ನು ಹೊಂದಿರಬೇಕು.

6. ತರಬೇತಿ ನೀಡುವ ಶಿಕ್ಷಕರು ಕಡ್ಡಾಯವಾಗಿ ಟಿಒಟಿ ತರಬೇತಿ ಹೊಂದಿರಬೇಕು.

7. ತರಬೇತಿ ಕೇಂದ್ರವು ಫಲಾನುಭವಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ ಕೈಗಾರಿಕಾ ಘಟಕಗಳೊಂದಿಗೆ ಒಡಂಬಡಿಕೆ ಹೊಂದಿರಬೇಕು.

ಕಾರಂಜಾ ಹಾಗೂ ಚುಳಕಿನಾಲಾ ಯೋಜನೆ

15 (44) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಜಲಸಂಪನ್ಮೂಲ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೀದರ್ ಜಿಲ್ಲೆಯ ಕಾರಂಜಾ, ಚುಳಕಿನಾಲಾ ಯೋಜನೆ 2013–14ನೇ ಸಾಲಿನಲ್ಲಿ ಮುಗಿಸಲು ಸರ್ಕಾರ ಇಲ್ಲಿಯವರೆಗೆ ಎಷ್ಟು ಅನುದಾನವನ್ನು ನೀಡಲಾಗಿದೆ; (ರಾಜ್ಯ ಹಾಗೂ ಕೇಂದ್ರದ ಅನುದಾನದ ವರ್ಷಾವಾರು ಪೂರ್ಣ ವಿವರ ನೀಡುವುದು)